ಆ ಸೆಕೆಂಡ್ಸ್ ಮಾರಾಟ ರಾಜ್ಯದಲ್ಲಿ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇದನ್ನು ತಡೆಗಟ್ಟಲು ಕೈಗೊಂಡ ಕ್ರಮವೇನು?

ಇ ಸೆಕೆಂಡ್ಸ್ ಮಾರಾಟ ನಿಲ್ಲಿಸುವುದರಿಂದ ಸರ್ಕಾರಕ್ಕೆ ಹೆಚ್ಚಿಗೆ ಆದಾಯ ಬರುವುದೆ?(ವಿವರ ನೀಡುವುದು)

ಉತ್ತರ

ಅ ಅಂದಾಜು ರೂ 2 102 ಕೋಟಿಗಳು

ಆ ಹೌದು

ಅಂತಹ ಪ್ರಕರಣಗಳು ಪತ್ತೆಯಾದಾಗಲೆಲ್ಲಾ ಮೊಕದ್ದಮೆಗಳನ್ನು ದಾಖಲಿಸಿ ನ್ಯಾಯಾಲಯಕ್ಕೆ ನಲ್ಲಿಸಲಾಗಿದೆ ಇದಲ್ಲದೆ ಇಲಾಖೆಯ ಜಾರಿ ವಿಭಾಗದ ಕಾರ್ಯ ಚಟುವಟಿಕೆಗಳನ್ನು ಬಲಪಡಿಸಲಾಗಿದೆ

ಇ ಈ ವಿಷಯದಲ್ಲಿ ಯಾವುದೇ ಅಂದಾಜು ಮಾಡಿರುವುದಿಲ್ಲ

ಸಂತೇಮರಳ್ಳಿ ವ್ಯಾಪ್ತಿಯ ದೇವನೂರು ಉಪಕೇಂದ್ರದಲ್ಲಿ ಹೆಚ್ಚುವರಿ ಟ್ರಾನ್ಸ್‌ಫಾರ್ಮರ್ ಅಳವಡಿಸುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 146(14)

ಸದಸ್ಯರ ಹೆಸರು ಶ್ರೀ ಕೃಷ್ಣಮೂರ್ತಿ ಎ ಆರ್ (ಸಂತೇಮಾರನಹಳ್ಳಿ)

ಉತ್ತರಿಸುವ ಸಚಿವರು ಶ್ರೀ ವೀರಕುಮಾರ್ ಅ ಪಾಟೀಲ್(ಇಂಧನ ಸಚಿವರು)

ಪ್ರಶ್ನೆ

ಅ ಸಂತೇಮರಳ್ಳಿ ಕ್ಷೇತ್ರ ವ್ಯಾಪ್ತಿಯ ದೇವನೂರು ಉಪಕೇಂದ್ರದಲ್ಲಿ ಹೆಚ್ಚುವರಿಯಾಗಿ ಅಳವಡಿಸಲು ಉದ್ದೇಶಿಸಿರುವ 6 3 ಎಂ ವಿ ಎ ಪವರ್ ಟ್ರಾನ್ಸ್ ಫಾರ್ಮರ್‌ನ್ನು ಯಾವಾಗ ಅಳವಡಿಸಲಾಗುವುದು? ಹೆಚ್ಚುವರಿ 10 ಮೆಗಾವ್ಯಾಟ್ ಬೇಡಿಕೆಯಿರುವ ಈ ಉಪಕೇಂದ್ರಕ್ಕೆ 6 3 ಎಂ ವಿ ಎ ಪವರ್ ಟ್ರಾನ್ಸ್‌ಫಾರ್ಮರ್ ಅಳವಡಿಸಿದ್ದಲ್ಲಿ ಈ ಬೇಡಿಕೆಯು ಪೂರ್ಣಗೊಳ್ಳುವುದೇ ಇಲ್ಲದಿದ್ದಲ್ಲ ಈ ಬೇಡಿಕ ಪೂರ್ಣಗೊಳ್ಳಲು

ಇನ್ನೇನಾದರೂ ಕ್ರಮ ಕೈಗೊಳ್ಳಲು ಉದ್ದೇಶಿಸಲಾಗಿದೆಯೇ? ವಿವರ ನೀಡುವುದು?

ಆ ರಾಜ್ಯದಲ್ಲಿ ಕುಡಿಯುವ ನೀರು ಮತ್ತು ಮನೆ ದೀಪಗಳಿಗಾಗಿ ಪ್ರತಿ ಗ್ರಾಮದಲ್ಲಿಯೂ ಗ್ರಾಮ ವಂಮಿತಿಯಲ್ಲಿ ಪ್ರತ್ಯೇಕ ಟ್ರಾನ್ಸ್‌ಫಾರ್ಮರ್ ಅಳವಡಿಸುವ ಉದ್ದೇಶಿತ ಯೋಜನೆಯು ಸರ್ಕಾರದ ಮುಂದಿದೆಯೇ? ಈ ಉದ್ದೇಶಿತ ಯೋಜನೆಯಿಂದ ಕುಡಿಯುವ ನೀರು ಮತ್ತು ಮನೆ ದೀಪಗಳ ಸಮಸ್ಯೆಯನ್ನು ಬಗೆಹರಿಸಬಹುದಲ್ಲವೇ? ಪ್ರತಿ ಗ್ರಾಮ ಪರಿಮಿತಿಯಲ್ಲಿ ಟ್ರಾನ್ಸ್‌ಫಾರ್ಮರ್ ಅಳವಡಿಸಲು ತಗಲುವ ಅಂದಾಜು ವೆಚ್ಚವೆಷ್ಟು? ಈ ಯೋಜನೆಯನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ? (ವಿವರ ನೀಡುವುದು)?

ಉತ್ತರ

ಆ ನಂತೆಮರಳ್ಳಿ ಕ್ಷೇತ್ರ ವ್ಯಾಪ್ತಿಯ ದೇವನೂರು ಉಪ ಕೇಂದ್ರದಲ್ಲಿ ಹೆಚ್ಚುವರಿಯಾಗಿ 1x6 3 ಎಂ ವಿ ಎ ಸಾಮರ್ಥ್ಯದ ಪವರ್ ಟ್ರಾನ್ಸ್‌ಫಾರ್ಮರ್‌ನ್ನು ಅಳವಡಿಸುವ ಕೆಲಸವು ಪ್ರಗತಿಯಲ್ಲಿದೆ ಸದರಿ ಕೆಲಸವನ್ನು ಮಾರ್ಚ್-2002ರ ಅಂತ್ಯದ ವೇಳೆಗೆ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ ಹಾಲಿ ಇರುವ 6 3 ಎಂ ವಿ ಎ ಸಾಮರ್ಥ್ಯದ ಪವರ್ ಟ್ರಾನ್ಸ್‌ಫಾರ್ಮರ್ ಜೊತೆಗೆ ಹೆಚ್ಚುವರಿಯಾಗಿ ಅಳವಡಿಸಲಾಗುವ 6 3 ಎಂ ವಿ ಎ ಸಾಮರ್ಥ್ಯದ ಪವರ್ ಟ್ರಾನ್ಸ್‌ಫಾರ್ಮರ್ ಜೊತೆಗೆ, ಹೆಚ್ಚುವರಿಯಾಗಿ ಅಳವಡಿಸಲಾಗುವ 6 3 ಎಂ ವಿ ಎ ಸಾಮರ್ಥ್ಯದ ಪವರ್ ಟ್ರಾನ್ಸ್‌ಫಾರ್ಮರ್ ಚಾಲನೆಗೊಂಡ ನಂತರ ಒಟ್ಟು ಸುಮಾರು 19 ಮೆಗಾ ವ್ಯಾಟ್ ವಿದ್ಯುತ್ ಬೇಡಿಕೆಯನ್ನು ನೀಗಿಸಲು ಸಾಧ್ಯವಾಗುವುದು

ಆ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳಿಗೆ ಹಾಗೂ ಮನೆಗಳ ದೀಪಗಳಿಗೆ ವಿದ್ಯುತ್ ಸರಬರಾಜು ನೀಡುವ ಸಂದರ್ಭಗಳಲ್ಲಿ ಪ್ರಸ್ತುತ ವಿದ್ಯುತ್ ಜಾಲವನ್ನು ತಾಂತ್ರಿಕವಾಗಿ ಪರಿಶೀಲಿಸಿ ಕಡಿಮ ವೋಲ್ಟೇಜ್ ಉಂಟಾಗುವ ಸಂದರ್ಭಗಳಲ್ಲಿ ಪ್ರತ್ಯೇಕ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸಲಾಗುವುದು ಲೈನ್‌ನ ವಿನ್ಯಾಸದೊಂದಿಗೆ ಸೇರಿದಂತೆ ಪ್ರತಿ ಟ್ರಾನ್ಸ್ ಫಾರ್ಮರ್ ಅಳವಡಿಸಲು ತಗಲುವ ಅಂದಾಜು ವೆಚ್ಚ ರೂ 2 33,000-00

ಪಿರಿಯಾವಟ್ಟಣ ಏತ ನೀರಾವರಿ ಕಾಮಗಾರಿಗೆ ವಿದ್ಯುತ್ ಸೌಲಭ್ಯ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 147(30)